ನಂದೀದುರ್ಗ ಡಿವೀಜ್ಞ.

ತಾರೀಖು 29ನೇ ಕಪ್ಟಂಬರ್ 1876.

ಶಿಡ್ಲಘಟ್ಟದ ತಾಲ್ಲೂಕು ಹಂಗಾಮೀ ಮರಹವ್ಮತ್ ಮುತ್ಸದ್ದಿ ಗುಂಡಪ್ಪಗೆ ಆತ ಉಪಯೋಗಿಸಿಕ್ಕೊಳ್ಳುವ ತಾರೀಖು ಲಗಾಯ್ತು ರಾಮಕೃಷ್ಣಯ್ಯನೆಂಬವನ ಬದಲೀವೇಲೆ 25 ದಿನಗಳ ರಜಾ ಮಂಜೂರಾಗಿರುತ್ತೆ.

J. L. PEARSE,
Commissioner.

ಎಕ್ಸ್‌ಪೆರಿಮೆಂಟಲ್ ಫಾರಂ.

ತಾರೀಖು 18ನೇ ಕಪ್ಟಂಬರ್ 1876.

ಫಾರಂ ಅಂದರೆ ವ್ಯವಸಾಯ ವಿಷಯದ ಅಜಮಾಯಿಷೀ ಜಮೀನಿನ ಸೂಪರಿಂಟೆಂಡೆಂಟರು ಇದರಿಂದ ತಿಳಿಯಪಡಿಸುವದೇನಂದರೆ,—ಯಾವದಿನದಲ್ಲಾಗಲಿ ಬೆಳಿಗ್ಗೆ 7 ಗಂಟೆಗಳವೊದಲು 9 ಗಂಟೆಗಳವರಿಗೆ ಫಾರಂ ಜಾಗಾದಲ್ಲಿ ಬರತಕ್ಕ ಅಮಲ್‌ದಾರರ್, ನೇಟಿವ್ ಪೇಸಾಯಗಾರರು ಮತ್ತು ಪೇಸಾಯದ ವಿಷಯದೊಳಗೆ ಆಕ್ಕರೆವುಳ್ಳ ಜನಗಳು ಇವರುಗಳನ್ನು ಸದರೀ ಜಮೀನಿನಲ್ಲಿ ಬೆಳೆ ಇಡಲ್ಪಟ್ಟ ಹೊಸ ಫಸಲ್‌ಗಳ ಗುಣವನ್ನೂ ಹೊಸ ಸಾಧನಗಳ ಉಪಯೋಗಗಳನ್ನೂ, ವಿಧವಿಧವಾದ ಪೇಸಾಯದ ತರಹೇಗಳನ್ನೂ ಕುರಿತು ವಿವರಿಸುವಬಗ್ಗೆ ನೋಡಲಿಕ್ಕೆ ಅಪೇಕ್ಷೆಯುಳ್ಳವರಾಗಿದ್ದಾರೆ.

F. E. HARMAN,
Supt. of Experimental Farm.

MYSORE DISTRICT.

Notice of an application by Venkatachar for a certificate under Act XXVII of 1860.

ಮೈಸೂರು ಡಿ॥ ಡೆ॥ ಕಮ್ಮಿಷನರವರ ಕೋರ್ಟಿನಿಂದ.

ಸ॥ 1876ನೇ ಇಸವಿ ಸಿವಿಲ್ ಮಿಸಲೇನಿಯಸ್ ನಂ. 67.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಫಾತೀಯಾದ ತನ್ನ ಅಂಣ ಲಕ್ಷ್ಮಿಪುರಂ ಚಿನ್ನಸ್ವಾಮಯ್ಯಂಗಾರಿಗೆ ಬರಬೇಕಾದ 900 ರೂಪಾಯಿಗಳನ್ನು ವಸೂಲ್ ಮಾಡಿಕ್ಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರ್ಟಿಫಿಕೇಟು ಆಗಬೇಕೆಂದು ತಲಕಾಡು ತಾಲ್ಲೂಕು ಸೊಸಲೇ ಹೋಬಳಿ ಶ್ರೀರಂಗರಾಜಪುರದಲ್ಲಿ ಯಿರುವ ಲಕ್ಷ್ಮಿಪುರಂ ವೆಂಕಟಾಚಾರ್ಯಂಬುವನು ಕೊಟ್ಟು ಯಿರತಕ್ಕ ಅರ್ಜೀಯನ್ನು ಅಕ್ಟೋಬರ್ ತಿಂಗಳು 10ನೇ ತಾರೀಖು ದಿವಿ 11 ಗಂಟೆಗೆ ಹಿಯರಿಂಗ್ ಮಾಡುವದ್ದರಿಂದ ಯಿದರ ಮೇಲೆ ತಕರಾರು ವುಳ್ಳವರು ಆ ತಾರೀಖು ದಿವಿ 11 ಗಂಟೆಗೆ ಸರಿಯಾಗಿ ಈ ಕೋರ್ಟು ರೂಬರೂ ಹಾಜರಾಗಿ ಆ ವೆರವರ ತಕರಾರನ್ನ ಸ್ಥಿರಪಡಿಸಿಕ್ಕೊಳ್ಳತಕ್ಕದ್ದಿದೆ.

ತಾರೀಖು 14ನೇ ಮೊಹೇ ಕಪ್ಟಂಬರು ಸ॥ 1876ನೇ ಇಸವಿ, ಮೊಕ್ಕಾಂ ಮೈಸೂರು.

E. C. SHANMUGAVELU PILLE,
For Dy. Commr.

ಶಿವಮೊಗ್ಗಾ ಡಿಸ್ಟ್ರಿಕ್ಟು.

ಚನ್ನಗಿರೀಯಿಂದ ಶಿವಮೊಗ್ಗಾ ಜೈಯಿಲ್‌ಗೆ ಪೋಲಿಸಿನವರ ಪಹರೇವೇಲೆ ತೆಗದುಕ್ಕೊಂಡು ಹೋಗುತ್ತಿರುವ ಸಮಯದಲ್ಲಿ ಪರಾರಿಯಾದ ಖೈದಿ ಹೆಂಗಸಿನ ಚಹರೆ ಪಟ್ಟಿ.

ಹೆಸರು ರಂಗಿ—ಜಾತಿ ಬಡಿಗಿಯವಳು—ವೇಶ್ಯಾವೃತ್ತಿಯಲ್ಲಿ ಬೆಳಿಸಲ್ಪಟ್ಟವಳು—ವಾಸಸ್ಥಳ ಗೊತ್ತಿಲ್ಲ—ತಪ್ಪಿತ ಮನೇ ಇಲ್ಲೇಬಿದ್ದದ್ದು—ಶಿಕ್ಷೆ ಯರಡು ವರುಷಗಳ ಕಠಿಣಖೈದು—ವಯಸ್ಸು ಸುಮಾರು 25 ವರುಷ—ಎತ್ತರ ನಾಲ್ಕು ಅಡಿ ನಾಲ್ಕು ಅಂಗುಲ—ಯಾರಿಂದ ಶಿಕ್ಷೆ ವಿಧಿಸಲ್ಪಟ್ಟದ್ದು ಸಾಗರ ಸಬ್ ಡಿ॥ 1ನೇ ಕ್ಲಾಸ್ ಮೇಜಿಸ್ಟ್ರೇಟರಿಂದ.

ಮುಖ್ಯವಾದ ಗುರುತುಗಳು, ಕೆಂಪುಬಣ್ಣ ದಪ್ಪವಾದ ಕೀರ.

MAHOMED ALI,
For Offg. Dy. Commr.

CHITALDROOG DISTRICT.

Notice inviting claimants, if any, to the house tendered by the Shroff, Chitaldroog Taluk Treasury, as a security for the office he holds.

ಚಿತ್ರದುರ್ಗ ಡಿಸ್ಟ್ರಿಕ್ಟ್.

ಜುಡಿಷಲ್ ಅಸಿಸ್ಟೆಂಟ್ ಕಮ್ಮಿಷನರವರ ಕೋರ್ಟು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಚಿತ್ರದುರ್ಗ ಡಿಸ್ಟ್ರಿಕ್ಟು ಚಿತ್ರದುರ್ಗದ ತಾಲ್ಲೂಕು ಖಜಾನಾ ಸರಾಫ ಗುಂಡಪ್ಪನೆಂಬಾತನು ತನ್ನ ವುದ್ಯೋಗಕ್ಕಾಗಿ ಜಾಮೀನು ಖಾತರೇಬಗ್ಯೆ ಇದೆ ಚಿತ್ರದುರ್ಗದ ಕಸಬಾ ಟವ್ನಿನಲ್ಲಿ ಇರುವ ಸುಮಾರು 1000 ರೂಪಾಯಿ ಕ್ರಯ ಬಾಳಬಹುದಾದ ಮ್ಯುನಸಿಫಲ್ ನಂಬರು 851ನೇ ಬಾಬತು ತನ್ನ ಸ್ವಂತ ಮನೆಯನ್ನು ಸರಕಾರಕ್ಕೆ ಖಾತರೆಗೋಸ್ಕರ ಈಡು ಮಾಡಿಕೊಟ್ಟಿರುತ್ತಾನಾಗಿ ಈ ಮನೆಗೆ ಮತ್ಯಾರು ಹಕ್ಕು ಇದ್ದಲ್ಲಿಯು ಈ ಲಾಗಾಯಿತು 3 ತಿಂಗಳು ಒಳಗಾಗಿ ಆಂತಾ ಹಕ್ಕು ವುಳ್ಳವರು ಕ್ರಮವಾದ ದಸ್ತೈವೇಜು ವಗೈರೆ ನಿನೀ ಚಿತ್ರದುರ್ಗ ಡಿಸ್ಟ್ರಿಕ್ಟು ಟ್ರೆಜರೀ ಆಫಿನರವರ ಬಳಿಗೆ ಹಾಜರಾಗಬೇಕು ಆ ವಾಯಿದೆ ನಂತರ ಹಾಜರಾಗುವ ಪಕ್ಷಕ್ಕೆ ಅಂತಾ ವಿಷಯ ಮಂಜೂರು ಮಾಡುವದಿಲ್ಲ ತಿಳಿಯುವದು.

ತಾರೀಖು 15ನೇ ಮಾಹೆ ಶಪ್ಟಂಬರು 1876ನೇ ಇಸವಿ ಚಿತ್ರದುರ್ಗ.

S. VENKAT VARDAIENGAR,
Treasury Officer.

ಕರೆನ್ಸೀ ನೋಟ್ಗಳು.

ಇದರಡಿ ನಮೂದಿಸಲ್ಪಡುವ ಕರೆನ್ಸಿ ನೋಟುಗಳ ಅರ್ಧ ಭಾಗಗಳು ಕುಣಿಗಲನಿಂದ ಬೆಂಗಳೂರಿಗೆ ಟಪಾಲ್ ದ್ವಾರ ರವಾನೆ ಆಗುವಲ್ಲಿ ಹೋಗಿರುತ್ತವೆ.

ನಂಬರ್.	ಸರ್ಕಲ್.	ಮೊಬಲಗ್.	ಹಕ್ಕುದಾರನ ಹೆಸರು.
B/50 14029	ಮದ್ರಾಸ್	100	ಬೆಂಗಳೂರು ನಗರ್ತಪೇಟೆಯಲ್ಲಿರುವ ಜವೇರಿ ವರ್ಕ ವೆಂಗಳಗಿರಿ ಪೇರ್ಯ್ಯ ಯುಶೆಟ್ಟಿ
B/44 64251	ಡಿಟೋ	100	
B/44 26975	ಡಿಟೋ	100	
B/44 22176	ಡಿಟೋ	100	
B/44 88386	ಡಿಟೋ	20	
B/35 39527	ಡಿಟೋ	20	
B/42			

ಯಿದರಡಿ ನಮೂದಿಸಲ್ಪಡುವ ಕರೆನ್ಸಿನೋಟು ಹೋಗಿರುತ್ತೆ.

ನಂಬರ್.	ಸರ್ಕಲ್.	ಮೊಬಲಗ್.	ಹಕ್ಕುದಾರನ ಹೆಸರು.
B/44 78677	ಮದ್ರಾಸ್	100	ಬೆಂಗಳೂರಲ್ಲಿರುವ ಚೀಫ್ ಕಮ್ಮಿಷನ್ನರವರ ಖಜಾನೆ ಬರ್ಕಿಷೀರು ವೆಂ॥ ಶೆತುರಾಯರು.

ಅಮೃತ ಮಹಲ್.

ದನಗಳ ಮುಖ್ಯವಾದ ಹರಾಜು.

ಅಮೃತ ಮಹಲ್ ದನಗಳ ಬಾಬತು, ಬೀಜದ ಬಗ್ಯೆ ತಕ್ಕ ಕೆಲವು ಹೋರಿಗಳು, ಹಸುವುಗಳು, ಕರುವುಗಳು, ಸಣ್ಣ ಯೆತ್ತುಗಳು ಯಿವುಗಳು ಸಹಿತ ಉಳಿದಿರುವ ಕಾಲ್ನಡೆ 1876ನೇ ಅಕ್ಟೋಬರ್ 26ನೇ ನುಕ್ಕಂ ಗುರುವಾರ ದಿನದಲ್ಲೂ ಆತರುವಾಯ ದಿನಗಳಲ್ಲೂ ಹುಣಸೂರಲ್ಲಿ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು.

ಹರಾಜ್ ನಿಬಂಧನೆ—ನಗದು.

ಇದರಡಿ ರುಜು ಮಾಡತಕ್ಕವರನ್ನು ಕೇಳಿ ತಫಶೀಲ್ ತಿಳಿದುಕೊಳ್ಳಬಹುದು.

ಮು—ವಿ—50 ಜೊತೆ ಯೆತ್ತುಗಳು ಬಂಡಿಗೆ ತಯಾರ್ ಮಾಡಲ್ಪಡುವವು, ಮತ್ತು ಹೋರಿಗಳು ಜೊತೆಯಲ್ಲಿ ಹೋಗುವದಕ್ಕೆ ತಯಾರ್ ಮಾಡಲ್ಪಡುವವು.

CHAS. MCINROY, *Major,*
Sub-Asstt. Commissary Genl.,
In charge Amrut Mahal, by Mysore.

MYSORE GOVERNMENT PRESS, BANGALORE—1876.